


بسم اللهِ الرّحمٰن الرّحیم

# ತಬೂಕ್ ಯುದ್ಧದ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31–10–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ತಬೂಕ್ ಯುದ್ಧದ ಕುರಿತು ಇತ್ತೀಚೆಗೆ ಪ್ರಸ್ತಾಪಿಸಲಾಗುತ್ತಿದೆ. ಹಝ್ರತ್ ಪೈಗಂಬರ್(ಸ) ಈ ಯುದ್ಧಕ್ಕಾಗಿ ಹೊರಟ ಬಗ್ಗೆ ಚರಿತ್ರೆಯಲ್ಲಿರುವ ಹೆಚ್ಚಿನ ವಿವರಣೆ ಹೀಗಿದೆ: ಮುಸ್ಲಿಮರ ಸೇನೆಯು ವಿವಿಧ ತಂಗುದಾಣಗಳಲ್ಲಿ ಡೇರೆ ಹಾಕುತ್ತಾ ಪ್ರಯಾಣವನ್ನು ಮುಂದುವರೆಸಿತು. ಈ ಪ್ರಯಾಣದ ಉದ್ದಕ್ಕೂ ಝುಹ್ರ್ ಮತ್ತು ಅಸ್ರ್ ಹಾಗೂ ಮಗ್ರಿಬ್ ಮತ್ತು ಇಶಾ ನಮಾಝ್‌ಗಳನ್ನು ಜಮಾ ಮಾಡಿ (ಒಟ್ಟಿಗೆ) ನಿರ್ವಹಿಸಲಾಗುತ್ತಿತ್ತು. ಈ ಪ್ರಯಾಣದಲ್ಲಿ ಹಝ್ರತ್ ಅಬ್ದುರ್ರಹ್ಮಾನ್ ಇಬ್ನ್ ಔಫ್(ರ)ರಿಗೆ ನಮಾಝಿನ ಇಮಾಮತ್ (ನೇತೃತ್ವ) ವಹಿಸುವ ಸೌಭಾಗ್ಯ ದೊರೆಯಿತು.

ಈ ಪ್ರಯಾಣದ ವೇಳೆ ಹಝ್ರತ್ ಪೈಗಂಬರ್(ಸ) ಮತ್ತು ಮುಸ್ಲಿಮರ ಸೇನೆ ಸಮೂದ್ ಜನಾಂಗದ ಹಾಳುಬಿದ್ದ ನಗರದ ಸಮೀಪದಿಂದ ಹಾದುಹೋಗಿತ್ತು. ಈ ಪ್ರದೇಶದ ಹೆಸರು 'ಹಿಜ್ರ್' ಆಗಿದೆ ಮತ್ತು ಇದು ಮದೀನದಿಂದ ತಬೂಕ್‌ಗೆ ಹೋಗುವ ದಾರಿಯಲ್ಲಿ ಇದೆ, ಇತ್ತೀಚಿನ ದಿನಗಳಲ್ಲಿ ಇದನ್ನು ಮದಾಯಿನೇ ಸಾಲಿಹ್ ಎಂದು ಕರೆಯಲಾಗುತ್ತದೆ.

ಹಝ್ರತ್ ಪೈಗಂಬರ್(ಸ) ಈ ಸ್ಥಳದ ನೀರನ್ನು ಬಳಸುವುದರಿಂದಲೂ ವುಝೂ ಮಾಡುವುದರಿಂದಲೂ ಮುಸ್ಲಿಮರನ್ನು ತಡೆದರು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಅನ್ಯಾಯ ಮಾಡಿದ ಈ ಜನರ ಊರುಗಳಿಗೆ ಭಯದಿಂದ ಅಳುವ ಸ್ಥಿತಿಯಲ್ಲಿ ಅಲ್ಲದೇ ನೀವು ಪ್ರವೇಶಿಸಬೇಡಿರಿ. ಅನ್ಯಥಾ ಅವರಿಗೆ ಸಂಭವಿಸಿದ ವಿಪತ್ತು ನಿಮಗೆ ಸಂಭವಿಸಬಹುದು.' ಅಲ್ಲಿಂದ ದಾಟಿಹೋಗುವಾಗ ಹಝ್ರತ್ ಪೈಗಂಬರ್(ಸ) ತಮ್ಮ ಮುಖವನ್ನು ಮುಚ್ಚಿದರು ಎಂದೂ ತಮ್ಮ ಸವಾರಿಯನ್ನು ವೇಗಗೊಳಿಸಿದರು ಎಂದೂ ಒಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಇದೇ ಪ್ರಯಾಣದ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಒಂಟೆಯಾದ ಖಸ್ವಾಅ್ ಕಾಣೆಯಾದ ಘಟನೆಯೂ ಸಂಭವಿಸಿತು. ಈ ಸಂದರ್ಭದಲ್ಲಿ, ಹಝ್ರತ್ ಪೈಗಂಬರ್(ಸ) ಹೇಳಿದರು: "ಮುಹಮ್ಮದ್(ಸ) ತನ್ನನ್ನು ಪ್ರವಾದಿ ಎಂದು ಹೇಳುತ್ತಾರೆ, ಆದರೆ ತನ್ನ ಕಾಣೆಯಾದ ಒಂಟೆ ಎಲ್ಲಿದೆ ಎಂದು ಅವರಿಗೆ ತಿಳಿದಿಲ್ಲ ಎಂದು ಆಕ್ಷೇಪಣೆ ಮಾಡುವ ವ್ಯಕ್ತಿ ಹೇಳುತ್ತಾನೆ. ಆದರೆ ಅಲ್ಲಾಹನ ಆಣೆ! ನನಗೆ ಅಲ್ಲಾಹನು ನೀಡಿದ ಜ್ಞಾನವನ್ನು ಹೊರತುಪಡಿಸಿ ಬೇರೇನೂ ತಿಳಿದಿಲ್ಲ." ಅನಂತರ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: 'ಅಲ್ಲಾಹನು ಒಂಟೆಯ ಬಗ್ಗೆ ನನಗೆ ಈಗ ತಿಳಿಸಿದ್ದಾನೆ, ಅದು ಇಂತಿಂತಹ ಕಣಿವೆಯಲ್ಲಿದೆ.'

ಈ ಪ್ರಯಾಣದ ಸಮಯದಲ್ಲಿ, ಆಹಾರ ಕೂಡ ಮುಗಿದು ಹೋಯಿತು. ಜನರಿಗೆ ಹಸಿವಾದಾಗ, ಅವರು ತಮ್ಮ ನೀರು ಸಾಗಿಸುವ ಒಂಟೆಗಳನ್ನು ಕೊಯ್ಯಲು ಹಝ್ರತ್ ಪೈಗಂಬರ್(ಸ)ರಿಂದ ಅನುಮತಿ ಕೇಳಿದರು. ಹಝ್ರತ್ ಪೈಗಂಬರ್(ಸ) ಅನುಮತಿ ನೀಡಿದರು. ಆದರೆ ಹಝ್ರತ್ ಉಮರ್(ರ) ಹೇಳಿದರು: 'ಹೀಗೆ ಮಾಡಿದರೆ ಸವಾರಿಮೃಗಗಳು ಕಡಿಮೆಯಾಗುವುವು. ನೀವು ಜನರ ಬಳಿ ಉಳಿದಿರುವ ಆಹಾರವಸ್ತುಗಳನ್ನು ತರಿಸಿ ಅದರಲ್ಲಿ ಬರ್ಕತಿಗಾಗಿ ದುಆ ಮಾಡಿರಿ. ಅದರಂತೆ ಮಾಡಲಾಯಿತು. ಹಝ್ರತ್ ಪೈಗಂಬರ್(ಸ) ಆಹಾರ ವಸ್ತುಗಳ ಮೇಲೆ ಬರ್ಕತಿನ ದುಆ ಮಾಡಿದರು. ಇದರ ಪರಿಣಾಮವಾಗಿ, ಆಹಾರದಲ್ಲಿ ಎಷ್ಟು ಅನುಗ್ರಹ ಉಂಟಾಯಿತೆಂದರೆ, ಎಲ್ಲರೂ ಸಾಕಷ್ಟು ಆಹಾರ ಸೇವಿಸಿದ ನಂತರವೂ ಆಹಾರ ಉಳಿಯಿತು.

ವಿವಿಧ ಫಲಿತಾಂಶಗಳು ಮತ್ತು ಮಾರ್ಗದರ್ಶನದ ವಿಷಯಗಳು ತಿಳಿದುಬರುವ ಹಲವಾರು ಘಟನೆಗಳು ಈ ಪ್ರಯಾಣದ ವೇಳೆ ಸಂಭವಿಸಿದವು. ಉದಾಹರಣೆಗೆ, ಇಬ್ಬರು ವ್ಯಕ್ತಿಗಳ ನಡುವೆ ಜಗಳವಾಯಿತು. ಒಬ್ಬನು ಇನ್ನೊಬ್ಬನ ಕೈಯನ್ನು ಕಚ್ಚಿದನು. ಎರಡನೇ ವ್ಯಕ್ತಿ ಕೈಯನ್ನು ಹಿಂತೆಗೆದುಕೊಳ್ಳಲು ಪ್ರಯತ್ನಿಸಿದಾಗ, ಮೊದಲ ವ್ಯಕ್ತಿಯ ಹಲ್ಲುಗಳು ಮುರಿದುಹೋದವು. ಮೊದಲ ವ್ಯಕ್ತಿ ಮುರಿದ ಹಲ್ಲುಗಳಿಗಾಗಿ ದಿಯತ್ (ಪರಿಹಾರ) ನೀಡುವಂತೆ ಬೇಡಿಕೆಯಿಟ್ಟನು.

ಹಝ್ರತ್ ಪೈಗಂಬರ್(ಸ) ಈ ಬೇಡಿಕೆಯನ್ನು ನಿರಾಕರಿಸಿದರು ಮತ್ತು ಹೀಗೆ ಹೇಳಿದರು: 'ಒಂಟೆಯ ಬಾಯಿಯಲ್ಲಿ ಇರಿಸುವ ಹಾಗೆ ಆ ವ್ಯಕ್ತಿ ತನ್ನ ಕೈಯನ್ನು ನಿನ್ನ ಬಾಯಿಯಲ್ಲಿ ಅಗಿಯಲಿಕ್ಕಾಗಿ ಬಿಡಬೇಕಿತ್ತೇ?' ಒಟ್ಟಿನಲ್ಲಿ, ದಿಯತ್‌ಗೆ ಯಾರು ಅರ್ಹರು ಎಂದು ಸತ್ಯಗಳು ಮತ್ತು ಸಾಕ್ಷ್ಯಗಳ ಆಧಾರದಲ್ಲಿ ತೀರ್ಮಾನಿಸಲಾಗುತ್ತದೆ.

ಈ ಪ್ರಯಾಣದ ವೇಳೆ ಒಂದು ಖರ್ಜೂರದ ತೋಟದ ಬಳಿಯಿಂದ ಹಾದುಹೋಗುವಾಗ, ಆ ತೋಟದಲ್ಲಿ ಎಷ್ಟು ಖರ್ಜೂರದ ಹಣ್ಣು ಇರಬಹುದು ಎಂದು ಅಂದಾಜು ಮಾಡಲು ಹಝ್ರತ್ ಪೈಗಂಬರ್(ಸ) ಕೆಲವು ಸಹಾಬಿಯರೊಡನೆ ಹೇಳಿದರು. ಎಲ್ಲರೂ ಅಂದಾಜು ಮಾಡಿದರು, ಹಝ್ರತ್ ಪೈಗಂಬರ್(ಸ) ಸಹ ಅಂದಾಜು ಮಾಡಿದರು. ತೋಟದ ಮಾಲೀಕಳಾದ ಮಹಿಳೆ ಹತ್ತಿರದಲ್ಲೇ ನಿಂತಿದ್ದಳು. ಹಣ್ಣುಗಳನ್ನು ಇಳಿಸುವಾಗ ಅದರ ತೂಕವನ್ನು ನೆನಪಿಡುವಂತೆ ಆಕೆಗೆ ಹೇಳಲಾಯಿತು. ಪ್ರಯಾಣದಿಂದ ಹಿಂತಿರುಗಿದಾಗ, ಆ ತೋಟದಿಂದ ಪಡೆದ ಹಣ್ಣಿನ ಬಗ್ಗೆ ಆ ಮಹಿಳೆಯೊಡನೆ ಕೇಳಲಾದಾಗ, ಹಝ್ರತ್ ಪೈಗಂಬರ್(ಸ) ಅಂದಾಜು ಮಾಡಿದಷ್ಟೇ ತೂಕವನ್ನು ಆಕೆ ತಿಳಿಸಿದಳು.

ಈ ಪ್ರಯಾಣದ ವೇಳೆ ಒಂದು ದಿನ ಹಝ್ರತ್ ಪೈಗಂಬರ್(ಸ) ಹೇಳಿದರು: 'ಇಂದು ರಾತ್ರಿ ಬಹಳ ತೀವ್ರವಾದ ಬಿರುಗಾಳಿ ಬೀಸಲಿದೆ.' ಹಾಗೆಯೇ ಆಯಿತು ಮತ್ತು ಭಾರಿ ಬಿರುಗಾಳಿ ಬೀಸಿತು.

ಈ ಪ್ರಯಾಣದ ಸಮಯದಲ್ಲಿ ಅನೇಕ ರೀತಿಯ ಅದ್ಭುತ ಕಾರ್ಯಗಳು ಸಹ ಘಟಿಸಿದವು. ಅವುಗಳಲ್ಲಿ ಮಳೆ ಬಂದದ್ದು, ಆಹಾರ ಮತ್ತು ಪಾನೀಯದಲ್ಲಿ ವೃದ್ಧಿ, ಖಾಲಿ ಬಾವಿಗಳಲ್ಲಿ ನೀರು ತುಂಬಿದಂತಹ ದೃಷ್ಟಾಂತಗಳು ಸೇರಿವೆ.

ತಬೂಕ್ ಯುದ್ಧದಲ್ಲಿ ಕಾವಲುಗಾರಿಕೆಯ ವಿಷಯಕ್ಕೆ ಸಂಬಂಧಿಸಿದಂತೆ ಹೀಗೆ ಪ್ರಸ್ತಾಪಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಹಝ್ರತ್ ಉಬಾದ್ ಇಬ್ನ್ ಬಿಶ್ರ್(ರ)ರನ್ನು ವಿಶೇಷ ರಕ್ಷಣೆಗಾಗಿ ನೇಮಿಸಿದರು, ಅವರು ತಮ್ಮ ಸಂಗಡಿಗರೊಂದಿಗೆ ಸೈನ್ಯದ ಸುತ್ತಲೂ ಗಸ್ತು ತಿರುಗುತ್ತಿದ್ದರು. ಒಂದು ದಿನ ಅವರು ಕೇಳಿದರು: 'ಯಾ ರಸೂಲಲ್ಲಾಹ್, ನಾವು ರಾತ್ರಿ ಗಸ್ತು ತಿರುಗುವಾಗ ತಕ್ಬೀರ್ (ಅಲ್ಲಾಹು ಅಕ್ಬರ್) ಶಬ್ದವನ್ನು ಕೇಳುತ್ತೇವೆ. ನೀವು ನಮ್ಮನ್ನಲ್ಲದೇ ಬೇರೆ ಯಾರನ್ನಾದರೂ ಕಾವಲುಗಾರರನ್ನಾಗಿ ನೇಮಿಸಿದ್ದೀರಾ?' ಹಝ್ರತ್ ಪೈಗಂಬರ್(ಸ) ಹೇಳಿದರು: 'ನಾನು ನಿಮ್ಮ ಹೊರತಾಗಿ ಬೇರೆ ಯಾರನ್ನೂ ನೇಮಿಸಿಲ್ಲ, ಆದರೆ ಕೆಲವು ಮುಸ್ಲಿಮರು ತಾವಾಗಿಯೇ ಸ್ವಯಂಸೇವಕರಾಗಿ ಹೊರಟಿರಬಹುದು.' ಆಗ ಹಝ್ರತ್ ಸಲ್ಕಾನ್ ಇಬ್ನ್ ಸಲಾಮ(ರ) ಎದ್ದು ನಿಂತರು. ಪ್ರವಾದಿಯ ಮೇಲಿನ ಪ್ರೀತಿಯಿಂದ ಅವರು ಸ್ವತಃ ಈ ಕೆಲಸವನ್ನು ಮಾಡುತ್ತಿದ್ದರು. ಅವರಿಗೆ ಈ ಕೆಲಸ ನೀಡಲಾಗಿರಲಿಲ್ಲ. ಅವರು ಹೇಳಿದರು: 'ಯಾ ರಸೂಲುಲ್ಲಾಹ್, ನಾನು ನನ್ನ ಹತ್ತು ಕುದುರೆಸವಾರರೊಂದಿಗೆ ಹೊರಡುತ್ತೇನೆ ಮತ್ತು ಈ ಕರ್ತವ್ಯ ನಿರ್ವಹಿಸುವವರ ಸಂರಕ್ಷಣೆ ಮಾಡುತ್ತೇನೆ.' ಆಗ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: 'ಅಲ್ಲಾಹನ ಮಾರ್ಗದಲ್ಲಿ ಕಾವಲುಗಾಯುವವರ ಸಂರಕ್ಷಣೆ ಮಾಡುವವರ ಮೇಲೆ ಅಲ್ಲಾಹನು ಕರುಣೆ ತೋರಲಿ.' ಜನರಲ್ಲಿ ಅಥವಾ ಜಾನುವಾರುಗಳಲ್ಲಿ ನೀವು ರಕ್ಷಣೆ ಮಾಡಿದ ಪ್ರತಿಯೊಂದು ಜೀವ ಮತ್ತು ಜಾನುವಾರಿನ ಬದಲಾಗಿ ನಿಮಗೆ ಒಂದೊಂದು ಪರ್ವತದಷ್ಟು ಪ್ರತಿಫಲ ಲಭಿಸುವುದು.

ತಬೂಕ್ ಪ್ರಯಾಣದ ಸಮಯದಲ್ಲಿ, ಪ್ರತಿ ತಂಗುದಾಣಗಳಲ್ಲಿ ಕೆಲವರು ಹಿಂದೆ ಉಳಿದುಬಿಡುತ್ತಿದ್ದರು. ಇಂದು ಒಬ್ಬರು ಹಿಂದೆ ಉಳಿದರು ಎಂದು ಸಹಾಬಿಯರು ತಿಳಿಸುವಾಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: 'ಅವರನ್ನು ಬಿಟ್ಟುಬಿಡಿರಿ, ಅವರಲ್ಲಿ ಏನಾದರೂ ಒಳ್ಳೆಯದು ಇದ್ದರೆ, ಅಲ್ಲಾಹನು ಅವರನ್ನು ನಿಮ್ಮೊಂದಿಗೆ ಸೇರಿಸುವನು. ಇಲ್ಲದಿದ್ದರೆ, ಅಲ್ಲಾಹನು ನಿಮ್ಮನ್ನು ಅವರಿಂದ ಮುಕ್ತಗೊಳಿಸುವನು.'

ಒಂದು ಬಾರಿ ಹಝ್ರತ್ ಅಬೂಝ್ಝುರ್(ರ)ರ ಒಂಟೆ ಸಂಪೂರ್ಣವಾಗಿ ಸುಸ್ತುಗೊಂಡಿತು. ಕೊನೆಗೆ ಅವರು ತಮ್ಮ ಒಂಟೆಯನ್ನು ಬಿಟ್ಟು, ಸಾಮಾನುಗಳನ್ನು ಸ್ವಂತ ತಲೆಯ ಮೇಲೆ ಹೊತ್ತು ಹಝ್ರತ್ ಪೈಗಂಬರ್(ಸ)ರನ್ನು ಹಿಂಬಾಲಿಸಲು ನಡೆದರು. ಕೆಲವು ದಿನಗಳ ನಂತರ, ಒಂದು ತಂಗುದಾಣದಲ್ಲಿ ಡೇರೆ ಹಾಕಲಾದಾಗ ಒಬ್ಬ ವ್ಯಕ್ತಿ ಒಬ್ಬಂಟಿಯಾಗಿ ಅದರ ಕಡೆಗೆ ನಡೆದು ಬರುತ್ತಿರುವುದನ್ನು ಜನರು ನೋಡಿದರು ಮತ್ತು ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಅದು ಅಬೂಝ್ಝುರ್ ಆಗಿದ್ದರೆ ಚೆನ್ನಾಗಿತ್ತು!' ಅವರು ಹತ್ತಿರ ಬಂದಾಗ, ಬರುತ್ತಿರುವುದು ಅಬೂಝ್ಝುರ್ ಅವರೇ ಆಗಿದ್ದಾರೆ ಎಂದು ಜನರು ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ಅಲ್ಲಾಹನು ಅಬೂಝ್ಝುರ್‌ರ ಮೇಲೆ ಕರುಣೆ ತೋರಲಿ; ಅವರು ಒಬ್ಬಂಟಿಯಾಗಿ ನಡೆದಿದ್ದಾರೆ, ಒಬ್ಬಂಟಿಯಾಗಿ ನಿಧನರಾಗುವರು ಮತ್ತು ಒಬ್ಬಂಟಿಯಾಗಿಯೇ ಎಬ್ಬಿಸಲ್ಪಡುವರು.'

ಹಝ್ರತ್ ಪೈಗಂಬರ್(ಸ)ರ ಈ ಮಾತು ಹಝ್ರತ್ ಅಬೂಝ್ಝುರ್(ರ)ರ ವಿಷಯದಲ್ಲಿ ಅಕ್ಷರಶಃ ನಿಜವಾಯಿತು. ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಅವಧಿಯಲ್ಲಿ, ಅವರು ತಮ್ಮ ಕುಟುಂಬದೊಂದಿಗೆ ಮದೀನದಿಂದ ಹೊರಗೆ ದೂರದ ಸ್ಥಳಕ್ಕೆ ತೆರಳಿದರು. ಅವರ ಮರಣದ ಸಮಯ ಹತ್ತಿರವಾದಾಗ, ಅವರ ಪತ್ನಿ ಚಿಂತಿತರಾದರು. ಆಗ ಹಝ್ರತ್ ಅಬೂಝ್ಝುರ್(ರ) ಹೇಳಿದರು: 'ಚಿಂತಿಸಬೇಡ. ನಿಮ್ಮಲ್ಲಿ ಒಬ್ಬರು ನಿರ್ಜನ ಪ್ರದೇಶದಲ್ಲಿ ಮರಣ ಹೊಂದುವರು ಮತ್ತು ಅವರ

ಜನಾಝ಼ ನಮಾಝ಼ಿನಲ್ಲಿ ಸತ್ಯವಿಶ್ವಾಸಿಗಳ ಒಂದು ಗುಂಪು ಭಾಗವಹಿಸುವುದು ಎಂದು ರಸೂಲುಲ್ಲಾಹ್(ಸ) ಹೇಳಿದ್ದನ್ನು ನಾನು ಕೇಳಿದ್ದೇನೆ. ಹಝ್ರ಼ತ್ ಪೈಗಂಬರ್(ಸ) ಇದನ್ನು ಹೇಳಿದ ಸಮಯದಲ್ಲಿ ಅಲ್ಲಿ ಹಾಜರಿದ್ದವರೆಲ್ಲರೂ ಈಗ ಮರಣ ಹೊಂದಿದ್ದಾರೆ ಮತ್ತು ಅವರಲ್ಲಿ ಯಾರೂ ನಿರ್ಜನ ಪ್ರದೇಶದಲ್ಲಿ ಮರಣ ಹೊಂದಿಲ್ಲ. ಹಾಗಾಗಿ ಆ ವ್ಯಕ್ತಿ ನಾನೇ ಆಗಿದ್ದೇನೆ. ಆದ್ದರಿಂದ ನೀನು ಚಿಂತಿಸಬೇಡ. ನಾನು ಮೃತಪಟ್ಟ ನಂತರ ನನಗೆ ಸ್ನಾನ ಮಾಡಿಸಿ ಮದೀನಕ್ಕೆ ಹೋಗುವ ದಾರಿಯಲ್ಲಿ ಇಡು.'

ಅದರಂತೆ ಮಾಡಲಾಯಿತು. ಸ್ವಲ್ಪ ಸಮಯದ ನಂತರ, ಅಬ್ದುಲ್ಲಾಹ್ ಇಬ್ನ್ ಮಸ್‌ಊದ್(ರ) ತಮ್ಮ ಸಂಗಡಿಗರೊಂದಿಗೆ ಅಲ್ಲಿಂದ ಹಾದುಹೋದರು. ಅವರು ಇರಾಕ್‌ನಿಂದ ಉಮ್ರಾದ ಉದ್ದೇಶದಿಂದ ಹೋಗುತ್ತಿದ್ದರು. ಅದು ಹಝ್ರ಼ತ್ ಅಬೂಝರ್(ರ)ರ ಜನಾಝ಼ ಆಗಿದೆ ಎಂದು ತಿಳಿದಾಗ, ಅವರು ಅಳಲು ಪ್ರಾರಂಭಿಸಿದರು ಮತ್ತು ಹೀಗೆ ಹೇಳಿದರು: 'ಅಬೂಝ಼ರ್ ಒಬ್ಬಂಟಿಯಾಗಿಯೇ ನಡೆಯುವವರು ಮತ್ತು ಒಬ್ಬಂಟಿಯಾಗಿಯೇ ಮರಣಹೊಂದುವವರು ಎಂದು ರಸೂಲುಲ್ಲಾಹ್(ಸ) ಹೇಳಿದ್ದು ನಿಜ. ಅನಂತರ ಅವರು ತಮ್ಮ ಸಂಗಡಿಗರೊಂದಿಗೆ ಹಝ್ರ಼ತ್ ಅಬೂಝ಼ರ್(ರ)ರ ಜನಾಝ಼ ನಮಾಝ಼ನ್ನು ನೆರವೇರಿಸಿದರು. ಅವರನ್ನು ಅಲ್ಲಿಯೇ ದಫನ್ ಮಾಡಲಾಯಿತು.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ರಬ್ವದ ಮಸೀದಿಯ ಮೇಲೆ ನಡೆದ ದಾಳಿಯಲ್ಲಿ ಗಾಯಗೊಂಡವರಿಗಾಗಿ ದುಆ ಮಾಡಿರಿ. ಗಾಯಗೊಂಡವರನ್ನು ಅಲ್ಲಾಹನು ತನ್ನ ಸಂರಕ್ಷಣೆಯಲ್ಲಿ ಇರಿಸಲಿ ಮತ್ತು ಬೇಗನೇ ಸಂಪೂರ್ಣ ಆರೋಗ್ಯವನ್ನು ನೀಡಲಿ. ಪಾಕಿಸ್ತಾನದಲ್ಲಿ ವಿರೋಧಿಗಳ ಎಲ್ಲ ಯೋಜನೆಗಳನ್ನು ಅಲ್ಲಾಹನು ವಿಫಲಗೊಳಿಸಲಿ. ರಬ್ವದಲ್ಲಿ 'ಖತಮೇ ನುಬುವ್ವತ್' ಹೆಸರಿನಲ್ಲಿ ವಿರೋಧಿಗಳ ಸಭೆ ನಡೆಯುತ್ತಿದೆ, ಮೌಲ್ವಿಗಳು ಯಾವೆಲ್ಲ ಕೆಟ್ಟ ಮತ್ತು ಅಸಭ್ಯ ಮಾತುಗಳನ್ನು ಹೇಳಬೇಕೋ ಅದನ್ನು ಹೇಳುತ್ತಿದ್ದಾರೆ. ಅಲ್ಲಾಹನು ಅವರ ಕೆಡುಕಿನಿಂದ ರಕ್ಷಿಸಲಿ. ಬಾಂಗ್ಲಾದೇಶದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಿಯೂ ವಿರೋಧಿಗಳು ದೊಡ್ಡ ದುರುದ್ದೇಶಗಳನ್ನು ಹೊಂದಿರುವವರು ಎಂದು ಅನಿಸುತ್ತಿದೆ. ಅಲ್ಲಾಹನು ಅಲ್ಲಿಯೂ ಪ್ರತಿಯೊಬ್ಬ ಅಹ್ಮದಿಯನ್ನು ಸಂರಕ್ಷಿಸಲಿ. ಪಲೆಸ್ತೀನಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ಮೇಲೆ ಕರುಣೆ ತೋರಲಿ ಮತ್ತು ದೌರ್ಜನ್ಯ ಮಾಡುವವರಿಂದ ಅವರಿಗೆ ಮುಕ್ತಿ ನೀಡಲಿ. ಕದನ ವಿರಾಮವು ಕೇವಲ ಹೆಸರಿಗೆ ಮಾತ್ರಕ್ಕೆ ಇದ್ದ ಕದನ ವಿರಾಮವಾಗಿತ್ತು ಎಂಬುದನ್ನು ಕಳೆದ ಎರಡು ದಿನಗಳಲ್ಲಿ ಸಂಭವಿಸಿದ ಘಟನೆಗಳು ಸಾಬೀತುಪಡಿಸಿವೆ. ಅಲ್ಲಾಹನು ಈ ದೌರ್ಜನ್ಯಕ್ಕೆ ಒಳಗಾದವರನ್ನು ಹಿಂಸೆಯಿಂದ ರಕ್ಷಿಸಲಿ ಮತ್ತು ಹಿಂಸೆ ಮಾಡುವವರನ್ನು ಹಿಡಿದು ಶಿಕ್ಷಿಸಲಿ.

——————————*****——————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَا هَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاۤءِ ذِي الْقُرْبٰى

وَيَنْهٰى عَنِ الْفَحْشَاۤءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)

At, ***'Masjid Mubarak',*** *Islamabad, Tilford,* U.K. On 31-10-2025

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon